AUGUST 10, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ಬೆಂಗಳೂರಿಗೆ ಭೇಟಿ; ವಂದೇ ಭಾರತ್ ರೈಲು ಸೇರಿದಂತೆ, ಮೆಟ್ರೋ ರೈಲು ಯೋಜನೆಗೆ, ಚಾಲನೆ.**
- **ಕಡ್ಡಾಯ ಸೇವೆ ಅಡಿ ನೋಂದಾಯಿತ, ಎಂ.ಬಿ.ಬಿ.ಎಸ್. ವೈದ್ಯರನ್ನು, 'ನಮ್ಮ ಕ್ಲಿನಿಕ್'ಗಳಿಗೆ ನಿಯೋಜಿಸಲು, ರಾಜ್ಯ ಸರ್ಕಾರದ, ಚಿಂತನೆ.**
- **ಹಸೆ, ಚಿತ್ತಾರ ಕಲೆ ಪರಿಣಿತ, ಉತ್ತರಕನ್ನಡ ಜಿಲ್ಲೆಯ, ಸರಸ್ವತಿ ನಾಯ್ಕ ದಂಪತಿಗೆ, 79ನೇ ಸ್ವಾತಂತ್ರ್ಯೋತ್ಸವಕ್ಕೆ, ಹೊಸ ದಿಲ್ಲಿಗೆ ಆಹ್ವಾನ.**
- **ವಿಜಯಪುರ ಜಿಲ್ಲೆ, ಮಮದಾಪುರದಲ್ಲಿ, ಶ್ರೀ ಸಿದ್ಧೇಶ್ವರ ವನಾರಣ್ಯ ಅಸ್ತಿತ್ವಕ್ಕೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಂಗಳೂರಿಗೆ ಭೇಟಿ ನೀಡಿ, ಸಾರ್ವಜನಿಕ ಸಮಾರಂಭವನ್ನುದ್ದೇಶಿಸಿ, ಮಾತನಾಡಲು, ತಾವು ಎದುರು ನೋಡುತ್ತಿರುವುದಾಗಿ, ಎಕ್ಸ್ ಮಾಧ್ಯಮದಲ್ಲಿ, ಕನ್ನಡ ಭಾಷೆಯಲ್ಲಿ ಪ್ರಕಟಿಸಿ ಗಮನ ಸೆಳೆದಿದ್ದಾರೆ.**

<><><>

**ಬೆಂಗಳೂರಿನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ, ಬೆಂಗಳೂರು–ಬೆಳಗಾವಿ, ಅಮೃತಸರ – ಶ್ರೀ ಮಾತಾ ವೈಷ್ಣೋದೇವಿ ಕತ್ರಾ ಹಾಗೂ ನಾಗಪುರ–ಪುಣೆ ಮಧ್ಯದ, ಮೂರು ವಂದೇ ಭಾರತ ರೈಲುಗಳಿಗೆ, ಪ್ರಧಾನಮಂತ್ರಿ ಹಸಿರು ಧ್ವಜ ತೋರಲಿದ್ದಾರೆ. ಬಳಿಕ, ಆರ್.ವಿ. ರಸ್ತೆಯ, ರಾಗಿಗುಡ್ಡ ಮೆಟ್ರೋ ನಿಲ್ದಾಣದಲ್ಲಿ, 7 ಸಾವಿರದ 160 ಕೋಟಿ ರೂಪಾಯಿ ವೆಚ್ಚದ, ಬೊಮ್ಮಸಂದ್ರದ ವರೆಗಿನ, ಬೆಂಗಳೂರು ಮೆಟ್ರೋ 2ರ, ಹಳದಿ ಮಾರ್ಗ ಉದ್ಘಾಟಿಸಲಿದ್ದಾರೆ. ಮೆಟ್ರೋ ರೈಲಿನಲ್ಲಿ**

ಕೊನಪ್ಪನ ಅಗ್ರಹಾರದ ವರೆಗೆ ಪ್ರಯಾಣಿಸಿ, ಇಲೆಕ್ಟ್ರಾನಿಕ್ ಸಿಟಿಯ, ಟ್ರಿಪಲ್ ಐ.ಟಿ.ಯಲ್ಲಿ ಬಿ.ಎಂ.ಆರ್.ಸಿ.ಎಲ್ ಆಯೋಜಿಸಿರುವ, 15 ಸಾವಿರದ 610 ಕೋಟಿ ರೂಪಾಯಿ ವೆಚ್ಚದ, ಬೆಂಗಳೂರು ಮೆಟ್ರೋ ಹಂತ 3 ಕ್ಕೆ, ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

<><><>

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕೇಂದ್ರ ಸಚಿವರು ಹಾಗೂ ಹಿರಿಯ ಅಧಿಕಾರಿಗಳು, ಪಾಲ್ಗೊಳ್ಳಲಿದ್ದಾರೆ.

<><><>

ಕಡ್ಡಾಯ ಸೇವೆ ಸೌಲಭ್ಯದಡಿ ನೋಂದಾಯಿತ, ಎಂ.ಬಿ.ಬಿ.ಎಸ್. ಪದವಿಧರ ವೈದ್ಯರನ್ನು, 'ನಮ್ಮ ಕ್ಲಿನಿಕ್'ಗಳಿಗೆ ನಿಯೋಜಿಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ ತಿಳಿಸಿದ್ದಾರೆ. ಬೆಳಗಾವಿಜಿಲ್ಲೆ, ಹುಕ್ಕೇರಿ ತಾಲೂಕು ಆಸ್ಪತ್ರೆ ಆವರಣದಲ್ಲಿ, ವಸತಿ ಗೃಹಗಳನ್ನು ಉದ್ಘಾಟಿಸಿ, ಮಾತನಾಡಿದರು. 'ನಮ್ಮ ಕ್ಲಿನಿಕ್' ನಲ್ಲಿ ವೈದ್ಯರ ಕೊರತೆ ತಮ್ಮ ಗಮನಕ್ಕೆ ಬಂದಿದೆ. ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವ ವೈದ್ಯರಿಗೆ 60 ರಿಂದ 75 ಸಾವಿರ ರೂಪಾಯಿ ವೇತನ ನಿಗದಿ ಪಡಿಲಾಗಿದೆ ಎಂದರು.

<><><>

ಗದಗ ಜಿಲ್ಲೆ, ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, ದಕ್ಷಿಣ ಕೋರಿಯಾದ, ವಿಶ್ವ ಶಾಂತಿ ಸಂಸ್ಥೆ,ಪ್ರತಿನಿಧಿಗಳು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅವರನ್ನು ಭೇಟಿ ಮಾಡಿ, ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ವಿಶ್ವ ಶಾಂತಿ ಸಂಸ್ಥೆ, 3ನೇ ವಿಶ್ವ ಶಾಖೆಯ ವ್ಯವಸ್ಥಾಪಕ ವೂನಮ್ ಕಿಮ್ ಹಾಗೂ ಅಂತಾರಾಷ್ಟ್ರೀಯ ಕಾನೂನು ಇಲಾಖೆ ನಿರ್ದೇಶಕ ಜೇಡೆನ್ ಲೀ ಅವರು, ನಿಯೋಗದಲ್ಲಿದ್ದರು. ವಿಶ್ವವಿದ್ಯಾಲಯದ ಕುಲಸಚಿವ ಸುರೇಶ ನಾಡಗೌಡರ ಪಾಲ್ಗೊಂಡಿದ್ದರು.

<><><>

ಶಿವಮೊಗ್ಗ ಜಿಲ್ಲೆಯ, 60 ಮಹತ್ವದ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ; 120 ಕೋಟಿ ರೂಪಾಯಿ ಮೊತ್ತದ, ಪ್ರವಾಸಿ ತಾಣ ಅಭಿವೃದ್ಧಿ ಪ್ರಸ್ತಾವ, ಜಿಲ್ಲಾಡಳಿತ ಸಿದ್ಧ ಪಡಿಸಿದೆ ಎಂದು, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ. ಸೆಪ್ಟೆಂಬರ್ 22ರ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಹಿನ್ನೆಲೆ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಪೂರ್ವಭಾವಿ ಸಿದ್ಧತಾ ಸಭೆ ನಡೆಸಿದರು. ಜಿಲ್ಲಾ ಉಸ್ತುವಾರಿ ಸಚಿವ, ಮಧು ಬಂಗಾರಪ್ಪ ಅವರ ಮಾರ್ಗದರ್ಶನದಲ್ಲಿ, ವಿಶ್ವ ವಿಖ್ಯಾತ ಜೋಗ ಜಲಪಾತ ಸೇರಿದಂತೆ, ಜಿಲ್ಲೆಯಲ್ಲಿ ಈಗಾಗಲೇ ಗುರುತಿಸಲಾದ ಹಾಗೂ ಈ ವರೆಗೆ ಗುರುತಿಸದಿರುವ, ಅಜ್ಞಾತ ಪ್ರವಾಸಿ ತಾಣಗಳನ್ನು, ವಿಶ್ವಕ್ಕೆ ಪರಿಚಯಿಸುವ ಸದುದ್ದೇಶದಿಂದ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಯೋಜನೆ ರೂಪಿಸಲಾಗಿದೆ ಎಂದರು.

<><><>

ಉತ್ತರಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಮನಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಹಸವಂತೆ ಗ್ರಾಮದ, ಹಸೆ ಕಲಾವಿದರಾದ, ಈಶ್ವರ ಹಾಗೂ ಸರಸ್ವತಿ ನಾಯ್ಕ ದಂಪತಿಗೆ, ಹೊಸ ದಿಲ್ಲಿಯಲ್ಲಿ ಆಯೋಜಿತ, 79ನೇ ಸ್ವಾತಂತ್ರೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು, ರಾಷ್ಟ್ರಪತಿ ಭವನದಿಂದ ಆಮಂತ್ರಣ ನೀಡಲಾಗಿದೆ ಎಂದು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ನಿರ್ದೇಶಕಿ ಪಿ.ಐ. ಶ್ರೀ ವಿದ್ಯಾ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಕೇಂದ್ರ ಪುರಸ್ಕೃತ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ – ಎನ್.ಆರ್.ಎಲ್.ಎಂ. ಹಾಗೂ ರಾಜ್ಯ ಸಂಚಾಲಿತ, ಸಂಜೀವಿನಿ ಯೋಜನೆಯಡಿ, ಸರಸ್ ಮೇಳಗಳಲ್ಲಿ ಪಾಲ್ಗೊಂಡು, ಚಿತ್ತಾರ ಕಲೆಯನ್ನು, ಇಡೀ ರಾಷ್ಟ್ರಕ್ಕೆ ಪರಿಚಯಿಸಿರುವ, ಸರಸ್ವತಿ ನಾಯ್ಕ, ಮನಮನೆ ಸಂಜೀವಿನಿ ಒಕ್ಕೂಟ ಹಾಗೂ ಪ್ರಗತಿ ಸ್ತ್ರೀ ಶಕ್ತಿ ಸಂಘದ, ಅಧ್ಯಕ್ಷೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಕಲಾವಿದೆ ಸರಸ್ವತಿ ನಾಯಕ್ ಧ್ವನಿ 49 ಸೆಕೆಂದುಗಳು

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(1 ನಿ. 15 ಸೆ.)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ವಿಜಯಪುರ ಜಿಲ್ಲೆ, ಬಬಲೇಶ್ವರ ತಾಲೂಕು, ಮಮದಾಪುರ ಗ್ರಾಮದಲ್ಲಿ, ಶ್ರೀ ಸಿದ್ಧೇಶ್ವರ ವನಾರಣ್ಯ ನಿರ್ಮಿಸಲಾಗಿದೆ; ಸುತ್ತಲಿನ ಗ್ರಾಮಸ್ಥರು, ವ್ಯಾಜ್ಯ ಮತ್ತುವ್ಯಸನ, ಮುಕ್ತರಾಗಬೇಕು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ಕೋರಿದ್ದಾರೆ. ಮಮದಾಪುರ ಗ್ರಾಮದಲ್ಲಿ, 120 ಲಕ್ಷ ರೂಪಾಯಿ ವೆಚ್ಚದಲ್ಲಿ, ಹೆಸ್ಕಾಂ ನೂತನ ಶಾಖಾಧಿಕಾರಿಗಳ ಕಚೇರಿ ಕಟ್ಟಡ ಮತ್ತು ಟೊಯೊಟಾ ಕಿರ್ಲೋಸ್ಕರ್ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, ಕರ್ನಾಟಕ ಪಬ್ಲಿಕ್ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿಗೆ, ಭೂಮಿ ಪೂಜೆ ನೆರವೇರಿಸಿ, ಮಾತನಾಡಿದರು. ಸಿದ್ಧೇಶ್ವರ ಶ್ರೀಗಳ ಆಶಯದಂತೆ ಬದುಕಿ, ಆದರ್ಶ ಗ್ರಾಮಗಳನ್ನಾಗಿ ಮಾಡಲು, ಗ್ರಾಮಸ್ಥರು ಕೈ ಜೋಡಿಸಬೇಕು ಎಂದು, ಅವರು ಮನವಿ ಮಾಡಿದರು. ಸುಸಜ್ಜಿತ, ಅತ್ಯಾಧುನಿಕ ವಿಜ್ಞಾನ ಪ್ರಯೋಗಾಲಯ ಸ್ಥಾಪನೆಗೆ ತಾವು ಚಿಂತಿಸಿದ್ದಾಗಿ, ಸಚಿವರು ತಿಳಿಸಿದರು.

<><><>

ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ವಾಸವಿ ಮಹಲ್ ನಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಆಯೋಜಿಸಿದ್ದ 'ರಕ್ಷಾ ಬಂಧನ ಉತ್ಸವ'ದಲ್ಲಿ ಪಾಲ್ಗೊಂಡರು. ಮುಖ್ಯ ಅತಿಥಿಯಾಗಿ ಕಿರಣ ಕಂಠಿ, ಆರ್.ಎಸ್.ಎಸ್. ಪ್ರಚಾರ ವಿಭಾಗದ ಪ್ರಮುಖ್, ಅರುಣಕುಮಾರ, ಬೌದ್ಧಿಕ್ ನಡೆಸಿಕೊಟ್ಟರು.

<><><>

ಮೈಸೂರಿನ, ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ ಸಂಚಾಲಿತ, ಕೃಷಿ ಕಲಾ ಸಂಸ್ಥೆದೇಸಿ ಬೀಜಗಳನ್ನು ಬಳಸಿ, ರಕ್ಷೆಗಳನ್ನು ತಯಾರಿಸಿ, ರಕ್ಷಾ ಬಂಧನಕ್ಕೆ, ವಿಶೇಷ ಅರ್ಥ ಹಾಗೂ ಮೆರಗು ತಂದಿದೆ. ಪ್ಲಾಸ್ಟಿಕ್, ಫೈಬರ್ ಹಾಗೂ ನೈಲಾನ್ ಭರಾಟೆಯ ಮಧ್ಯೆ, ಗ್ರಾಮೀಣ ಕೃಷಿಕ ಮಹಿಳೆಯರ ಕಲಾ ಕುಸುರಿ ಬಳಸಿಕೊಂಡು, ದೇಸಿ ಬೀಜಗಳ ರಕ್ಷೆ ತಯಾರಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕೃಷಿ ಕಲಾ ಸಂಚಾಲಕಿ ಶ್ರೀಸೀಮಾ ಕೃಷ್ಣಪ್ರಸಾದ.

<><><>

ಶ್ರೀಸೀಮಾ ಧ್ವನಿ 45 ಸೆಕೆಂದುಗಳು

<><><>

ಉಡುಪಿಯ ಶ್ರೀ ಕೃ ್ಣ ಮಠದ ಸುತ್ತ ನಿರ್ಮಿಸಲಾದ, ಕರಾವಳಿ ವಾಸ್ತುಶೈಲಿಯ, ಆವಾರ–ಪೌಳಿಯನ್ನು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಉದ್ಘಾಟಿಸಿದರು. ಬಳಿಕ, ಶ್ರೀಕೃ ್ಣನ ದರ್ಶನ ಪಡೆದರು. ಪಾಕ ಶಾಲೆಗೆ ತೆರಳಿ, ಶ್ರೀ ಕೃ ್ಣ ಪ್ರಸಾದ ತಯಾರಿಕೆಗೆ, ಚಾಲನೆ ನೀಡಿದರು. ಗೋ ಪೂಜೆ ನೆರವೇರಿಸಿ, ಗೋ ಶಾಲೆಯನ್ನು ವೀಕ್ಷಿಸಿದರು. ಪರ್ಯಾಯ ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರ ಶ್ರೀಪಾದರು, ಪುತ್ತಿಗೆಯ ಕಿರಿಯ ಶ್ರೀಗಳಾದ ಸುಶೀಂದ್ರ ತೀರ್ಥ ಸ್ವಾಮೀಜಿ, ಅದಮಾರು ಮಠಾಧೀಶ ಶ್ರೀ ವಿಶ್ವಪ್ರಿಯತೀರ್ಥ ಸ್ವಾಮೀಜಿ, ರಾಜ್ಯಸಭಾ ಸಂಸದೆ ಸುಧಾ ಮೂರ್ತಿ, ನಿವೃತ್ತ ನ್ಯಾಯಾಮೂರ್ತಿ ದಿನೇಶಕುಮಾರ, ಪಾಲ್ಗೊಂಡಿದ್ದರು.

<><><>

ಹುಬ್ಬಳ್ಳಿಯ, ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠದಲ್ಲಿ, ಶ್ರಾವಣ ಮಾಸದಅಂಗವಾಗಿ, ಇಂದು ಸಂಜೆ 5.30ಕ್ಕೆ, ಜಲ ರಥೋತ್ಸವ ಆಯೋಜಿತವಾಗಿದೆ. ಅದ್ವೈತ ಸಿದ್ಧಾಂತದ ಪ್ರತಿಪಾದಕ, ಶ್ರೀ ಸಿದ್ಧಾರೂಢ ಸ್ವಾಮೀಜಿಯವರ ಮಠದಲ್ಲಿ, ಜ್ಞಾನ ದಾಸೋಹ, ಅನ್ನ ದಾಸೋಹ ಹಾಗೂ ಶಿವ ಪಂಚಾಕ್ಷರಿ ಮಂತ್ರ ಪಠಣ, ನಿತ್ಯವೂ ನಡೆದು ಬಂದಿದೆ ಎಂದು, ವಿಶ್ವಸ್ಥ ಸಮಿತಿ ತಿಳಿಸಿದೆ.

<><><>

ಪಂಡಿತ ಶಂಕರ ತುಕಾರಾಮ ಸಾ ಕಬಾಡಿ ಅವರ, ಷಷ್ಟ್ಯಬ್ದ ಮಹೋತ್ಸವ ಹಿನ್ನೆಲೆ, ಧಾರವಾಡದ ಶ್ರೀ ಶಾರದಾ ಸಂಗೀತ ವಿದ್ಯಾಲಯ, ಇಂದು ಬೆಳಗ್ಗೆ 9 ಗಂಟೆಗೆ, ಆಲೂರು ವೆಂಕಟರಾವ್ ಭವನದಲ್ಲಿ, ಗುರುವಂದನಾ ಕಾರ್ಯಕ್ರಮ ಆಯೋಜಿಸಿದೆ. ಪಂಡಿತ ಬಿ.ಎಸ್.ಮಠ, ಪಂಡಿತ ರಘುನಾಥ ನಾಕೋಡ ಹಾಗೂ ಪಂಡಿತ ವಾದಿರಾಜ್ ನಿಂಬರಗಿ ಅಥಿತಿಗಳಾಗಿ, ಪಾಲ್ಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ಬೆಂಗಳೂರಿಗೆ ಭೇಟಿ; ವಂದೇ ಭಾರತ್ ರೈಲು ಸೇರಿದಂತೆ, ಮೆಟ್ರೋ ರೈಲು ಯೋಜನೆಗೆ, ಚಾಲನೆ.
- ಕಡ್ಡಾಯ ಸೇವೆ ಅಡಿ ನೋಂದಾಯಿತ, ಎಂ.ಬಿ.ಬಿ.ಎಸ್. ವೈದ್ಯರನ್ನು, 'ನಮ್ಮ ಕ್ಲಿನಿಕ್'ಗಳಿಗೆ ನಿಯೋಜಿಸಲು, ರಾಜ್ಯ ಸರ್ಕಾರದ, ಚಿಂತನೆ.

- ಹಸೆ, ಚಿತ್ತಾರ ಕಲೆ ಪರಿಣಿತ, ಉತ್ತರಕನ್ನಡ ಜಿಲ್ಲೆಯ, ಸರಸ್ವತಿ ನಾಯ್ಕ ದಂಪತಿಗೆ, 79ನೇ ಸ್ವಾತಂತ್ರ್ಯೋತ್ಸವಕ್ಕೆ, ಹೊಸ ದಿಲ್ಲಿಗೆ ಆಹ್ವಾನ.
- ವಿಜಯಪುರ ಜಿಲ್ಲೆ, ಮಮದಾಪುರದಲ್ಲಿ, ಶ್ರೀ ಸಿದ್ಧೇಶ್ವರ ವನಾರಣ್ಯ ಅಸ್ತಿತ್ವಕ್ಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>